ಎಂ.ಎ. ಕುಮಾರ್, ಬೆಂಗಳೂರು

*ನಡೆಯುವಾಗ ಗುಡಿ ಸಿಕ್ಕಿದರೆ ನಮಸ್ಕರಿಸುವ ನಾವು ಸರ್ಕಾರಿ ಆಸ್ಪತ್ರೆ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಬಂದಾಗ ಏಕೆ ನಮಸ್ಕರಿಸುವುದಿಲ್ಲ?*



ಸ್ಥಳ ಮಹಿಮೆ. ಗುಡಿ ಪುನಃ ಪುನಃ ನಮಸ್ಕಾರಕ್ಕೆ ಅರ್ಹ. ಆಸ್ಪತ್ರೆಗಳು ಅಂತಿಮ ನಮಸ್ಕಾರಕ್ಕೆ.

ಹೆಚ್.ಎಂ. ಅನಂತಪದ್ಮನಾಭ, ಮೈಸೂರು

*ಕಪ್ಪುಹಣಕ್ಕೂ, ಪ್ರೇಯಸಿಗೂ ಇರುವ ವ್ಯತ್ಯಾಸವೇನು?*

ಪ್ರೇಯಸಿಯನ್ನು ಹೊಂದುವುದರ ಮೇಲೆ ಮೋದಿ ನಿಷೇಧ ಹೇರುವಂತಿಲ್ಲ.

ವಿ.ಎಸ್. ಹಿಂದೂಪುರ, ಬಳ್ಳಾರಿ

*ಅಳುವಿನಲ್ಲಿ ಎಷ್ಟು ವಿಧಗಳು?*

ಎರಡೇ– ರಿಯಲ್ ಅಳು, ಸೀರಿಯಲ್ ಅಳು.

ಹಾಡ್ಯ ಬ. ಜಯಾನಂದ, ಮೈಸೂರು

*ಮಠಗಳಲ್ಲಿ ಆದ್ಯತೆ ಧ್ಯಾನಕ್ಕೋ, ಧಾನ್ಯಕ್ಕೋ?*

ಎರಡೂ ಅಲ್ಲ. ದಾನವಾಗಿ ಬರುವ ಧನಕ್ಕೆ.

ಬೋ.ಪಾ. ವೆಂಕಟೇಶ್, ಸಮೇತನಹಳ್ಳಿ

*ಬರಗಾಲದ ಸುಡು ಬಿಸಿಲಿನಲ್ಲಿ ಮಳೆ ಹೇಗಿರುತ್ತದೆ?*



ಕಳೆದುಹೋಗಿದ್ದ ಮಗುವಿಗೆ ಮತ್ತೆ ಅಮ್ಮನ ಅಪ್ಪುಗೆಯ ಹಿತ ದೊರೆತಂತೆ.

ಸಿಂಧು ಪಿ. ಬಸ್ತಿ, ಹುಬ್ಬಳ್ಳಿ

*ನೀವು ಯಾವ ಸಂವಿಧಾನ ಫಾಲೋ ಮಾಡ್ತೀರಿ – ರಾಮನದೋ, ಭೀಮನದೋ?*

ಹೆಣ್ಣಿನ ವಿಷಯದಲ್ಲಿ ರಾಮನದು, ಊಟದ ವಿಷಯದಲ್ಲಿ ಭೀಮನದು.

ಕುಮಾರ ಚಲವಾದಿ, ಹೊಳೆನರಸಿಪುರ

*ನಿಮ್ಮ ವಿದ್ಯಾಭ್ಯಾಸವೆಲ್ಲಿ ಆಯಿತು? ಎಲ್ಲಿಯವರೆಗೆ?*

ಇನ್ನೂ ಆಗಿಲ್ಲ. ಪ್ರತಿ ವಾರವೂ ಆಗುತ್ತಿದೆ. ಕೊನೆಯ ಉಸಿರವರೆಗೆ.

ಅಮರಯ್ಯಾ ಪತ್ರಿಮಠ, ಸುರಪೂರ

*ನಮ್ಮನ್ನು ನಾವು ಅರಿತುಕೊಳ್ಳುವ ಬಗೆ ಹೇಗೆ?*

ನಮ್ಮ ಬೆನ್ನ ಹಿಂದೆ ಜನ ಆಡಿಕೊಳ್ಳುವುದನ್ನು ಹಿತ್ತಾಳೆಕಿವಿಗಳ ಮೂಲಕ ಕೇಳಿ ತಿಳಿಯುವುದರಿಂದ.

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಕಣ್ಣಿಗೆ ಕಾಣದ ಕೈಗಳ ಸೂತ್ರಕ್ಕೂ, ಕಣ್ಣಿಗೆ ಕಾಣುವ ಮಂಗಳ ಸೂತ್ರಕ್ಕೂ ಏನಾದರೂ ಸಂಬಂಧವಿದೆಯೆ?*

ಎರಡೂ ಏಕಕಾಲದಲ್ಲಿ ಹೆಣ್ಣಿನ ಕೊರಳ ಸುತ್ತ ಬರುತ್ತವೆ – ಹಿಂದೆ ಮೂರುಗಂಟು ಹಾಕುವ ಕೈ ಕಾಣುವುದಿಲ್ಲ.....

ಎನ್.ಎಸ್. ಆನಂದ, ಬೆಂಗಳೂರು

*ಪುಸ್ತಕ ಕೊಂಡರೂ ಬುದ್ಧಿ ಬರುತ್ತಿಲ್ಲ; ಔಷಧಿ ಕೊಂಡರೂ ಗುಣವಾಗುತ್ತಿಲ್ಲ; ಹಾಸಿಗೆ ಕೊಂಡರೂ ನಿದ್ರೆ ಬರುತ್ತಿಲ್ಲ. ಏನು ಮಾಡಲಿ?*

ಬುದ್ಧಿ ಇಲ್ಲವೆಂದಿರೆ? ಗುಡ್. ಚುನಾವಣೆಗೆ ನಿಲ್ಲಿ; ಗೆಲ್ಲುತ್ತೀರಿ. ನಂತರ ವಿದೇಶದಲ್ಲಿ ಗುಣ, ವಿಧಾನಸೌಧದಲ್ಲಿ ನಿದ್ರೆ!

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

*ಅಮ್ಮನ ಮುತ್ತಿಗೂ, ಪತ್ನಿಯ ಮುತ್ತಿಗೂ ಇರುವ ವ್ಯತ್ಯಾಸವೇನು?*

ಒಂದು ತಂಪು, ಒಂದು ಬಿಸಿ.

ಜಾಕೋಬ್ ಡಿಸೋಜ, ಕುರುವಳ್ಳಿ

*ಮನುಷ್ಯನ ಜೀವನದ ನಿಜವಾದ ಅರ್ಥವೇನು ಸಾರ್?*

ಸ್ವಾರ್ಥವನ್ನು ಸರಿಸಿ ಸಾರ್ಥದತ್ತ ಸಾಗುವುದು.

ಎಚ್. ಆನಂದಕುಮಾರ್, ಚಿತ್ರದುರ್ಗ

*ದಾಸವಾಣಿಗೂ, ಕವಿವಾಣಿಗೂ, ರಾಜಕಾರಣಿಗಳ ವಾಣಿಗೂ ಇರುವ ವ್ಯತ್ಯಾಸ ಹೇಳು ಶಿವಾ ರಾಮು?*

ಕ್ರಮವಾಗಿ ಭಕ್ತಿಗೀತೆ, ಯುಕ್ತಿಗೀತೆ, ಬತ್ತಿಗೀತೆ.

ಎಂ.ಎನ್. ಸೋಮಶೇಖರ್, ಮೈಸೂರು

*ಮಾನವನಿಗೆ ತಲೆಯ ಹಿಂಭಾಗದಲ್ಲಿ ಮೂರನೆಯ ಕಣ್ಣು ಇದ್ದಿದ್ದರೆ ಹೇಗಿರುತ್ತಿತ್ತು?*

ಐಬ್ರೋ ಶೇಪ್ ಮಾಡಿಕೊಳ್ಳಲು, ಕಾಜಲ್ ಹಚ್ಚಿಕೊಳ್ಳಲು ಬಹಳ ಅವಸ್ಥೆ ಆಗುತ್ತಿತ್ತು.

## ಬಹುಮಾನಿತ ಪ್ರಶ್ನೆ

ಎ.ಪಿ. ರೇಣುಕಾ, ಮೈಸೂರು

*ಪುಗಸಟ್ಟೆ ಸಲಹೆ ಕೊಡುವವರಿಗೆ ಏನೆಂದು ಕರೆಯಬೇಕು ಸಾರ್?*

ತಮ್ಮ ಮನೆಯಲ್ಲೇ ಬೇಳೆ ಬೇಯಿಸಿಕೊಳ್ಳಲಾಗದ ವಿಫಲಚೇತನರು.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಅಹಂಕಾರಕ್ಕೂ, ದುರಹಂಕಾರಕ್ಕೂ ಇರುವ ವ್ಯತ್ಯಾಸವೇನು?*

ಮದವೆಂಬ ಯೂನಿವರ್ಸಿಟಿಯಲ್ಲಿ ಅಹಂಕಾರ ಪದವಿ; ದುರಹಂಕಾರ ಪಿಹೆಚ್‌ಡಿ.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಹಕ್ಕಿಗಳು ಸುಂದರ ಮನೆ ಮಾಡಿ, ಸಂತಾನಾಭಿವೃದ್ಧಿಯನ್ನು ಅಚ್ಚುಕಟ್ಟಾಗಿ ಮಾಡುವುದನ್ನು ಯಾರಿಂದ ಕಲಿತಿರಬಹುದು?*

ಗೂಡು ಕಟ್ಟಲು ಭಯ, ಅವಶ್ಯಕತೆ, ಅನುಭವಗಳೇ ಗುರು; ಸಂತಾನಾಭಿವೃದ್ಧಿಗೆ ಕುತೂಹಲವೇ ಗುರು.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಉಪ್ಪಿಗೂ, ಉಪ್ಪಿಟ್ಟಿಗೂ ವ್ಯತ್ಯಾಸವೇನು?*



ಒಂದನ್ನು ಕಂಡು 'ಐಯೋಡಿನ್ ಇದೆಯೆ?' ಎನ್ನುತ್ತಾರೆ. ಇನ್ನೊಂದನ್ನು ಕಂಡು 'ಅಯ್ಯೋ, ದಿನಾ ಇದೆಯೇ?' ಎನ್ನುತ್ತಾರೆ.

ದೇವೇಂದ್ರ, ಕಡೂರು

*ಕಷ್ಟಗಳು ಬರೋದು ವ್ಯಕ್ತಿತ್ವವನ್ನು ರೂಪಿಸಲಂತೆ. ಹೌದಾ?*

ಉಳಿಪೆಟ್ಟು ಅದೇ; ಶಿಲೆ ಉತ್ತಮವಾದುದಾದರೆ ವಿಗ್ರಹ; ಇಲ್ಲವಾದರೆ ಭಗ್ನ. ವ್ಯಕ್ತಿತ್ವಕ್ಕೆ ಅಂತಃಸತ್ವ ಮುಖ್ಯ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

*ಲವ್ ಮಾಡುವುದು ಹೇಗೆ ಎಂಬುದರ ಟುಟೋರಿಯಲ್ ಏನಾದರೂ ತೆರೆದರೆ ಏನಾದೀತು?*

ಹತ್ತಿರದಲ್ಲೇ ಕಲ್ಯಾಣಮಂಟಪ, ಹೆರಿಗೆ ಆಸ್ಪತ್ರೆಗಳನ್ನೂ ತೆರೆಯಬೇಕಾದೀತು.

■ ರಾಮ್